ವಾಹನ ನೋಂದಣಿ ಹಾಗೂ ಇತರೆ ಕೆಲಸ ಖಾಸಗಿಯವರಿಗೆ ವಹಿಸುವುದು

2113 (2398) - ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರಿಗೆ ಇಲಾಖೆಯ ಕೆಲವು ಕೆಲಸ ಕಾರ್ಯಗಳನ್ನು ಕಡಿಮೆಗೊಳಿಸಿ ಖಾಸಗಿಯವರಿಗೆ ನೀಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ?

ಆ) ಯಾವ ಯಾವ ಕೆಲಸಗಳನ್ನು ಖಾಸಗೀಯವರ ಉಸ್ತುವಾರಿಗೆ ವಹಿಸಲಾಗುವುದು/

ಇ) ಯಾವ ಉದ್ದೇಶಕ್ಕಾಗಿ ಈ ಕ್ರಮ ಕೈಗೊಳ್ಳಲಾಗುತ್ತಿದೆ?

ಈ) ಇಲಾಖೆಯಲ್ಲಿ ಭ್ರಷ್ಟಾಚಾರ ಹೆಚ್ಚಾಗುತ್ತಿದ್ದು, ಸಾರ್ವಜನಿಕರ ಕೆಲಸ ಶೀಘ್ರವಾಗಿ ಆಗುವ ನಿಟ್ಟಿನಲ್ಲಿ ಈ ಕ್ರಮ ಜರುಗಿಸಲಾಗುತ್ತಿದೆಯೆ?

ಉ) ಇದರಿಂದ ಸರ್ಕಾರಕ್ಕೆ ಆಗುವ ಲಾಭವೇನು? ಖಾಸಗಿಯವರಿಗೆ ನೀಡಿದ ಮೇಲೆ ಅವರು ಯಾವ ಯಾವ ಕೆಲಸಗಳಿಗೆ ಎಷ್ಟೆಷ್ಟು ಶುಲ್ಕವನ್ನು ಸಾರ್ವಜನಿಕರಿಂದ ಪಡೆಯುತ್ತಾರೆ? ವಿವರ ನೀಡುವುದು?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸಲಾದ ಮನೆಗಳು

2114 (2569) - ಶ್ರೀ ಎ. ರಾಮದಾಸ್ (ಕೃಷ್ಣರಾಜ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಸ್ವಂತ ಮನೆ ಹೊಂದಿ (ಓವೈಹೆಚ್ಎಸ್) ಮತ್ತು ಆಶಾ ಮಂದಿರ (ಹುಡ್ಕೋ ನೆರವು) ಯೋಜನೆಯಲ್ಲ ಮನೆಗಳನ್ನು ಕಟ್ಟಲಾಗಿತ್ತೆ ಯಾವ ಯಾವ ಸಾಲಿನಲ್ಲಿ ಎಷ್ಟು ಎಷ್ಟು ಮನೆಗಳನ್ನು ಕಟ್ಟಲು ಅರ್ಜಿ ಕರೆಯಲಾಗಿತ್ತು ಅರ್ಜಿದಾರರಿಂದ ಬಂದ ಹಣ ಎಷ್ಟು ಹುಡ್ಕೋದಿಂದ ಪಡೆದ ಸಾಲ ಎಷ್ಟು;

ಆ) ನಿರ್ಬಂಧನೆಯಂತೆ ಎಷ್ಟು ದಿನಗಳಲ್ಲಿ ಮನೆ ಕೆಲಸ ಮುಗಿಸಬೇಕಾಗಿತ್ತು ಎಷ್ಟು ಕಾಲಾವಕಾಶಗಳಲ್ಲಿ ಮನೆಯ ಪೂರ್ಣ ಕೆಲಸಮಾಡಿ ಗ್ರಾಹಕರಿಗೆ ನೀಡಲಾಯಿತು: ವಿಳಂಬವಾಗಿದ್ದರೆ ಕಾರಣ ಏನು ಇದಕ್ಕೆ ಕಾರಣ ಯಾರು?

ಇ) ನಿಗದಿಪಡಿಸಿದ ಹಣಕ್ಕಿಂತ ಹೆಚ್ಚು ಹಣವನ್ನು ಗ್ರಾಹಕರಿಂದ ಕೇಳಲಾಗಿದೆಯೇ ಯಾವ ಯಾವ ದರ್ಜೆಗೆ ಎಷ್ಟೆಷ್ಟು ಹೆಚ್ಚುವರಿ ಹಣ ಕೇಳಲಾಗಿದೆ ನಿಗದಿತ ಸಮಯದಲ್ಲಿ ಕೆಲಸ ಮಾಡದೆ ಹೆಚ್ಚುರರಿ ಹಣ ಕೇಳಲು ಮತ್ತು ಬಡ್ಡಿ ವಿಧಿಸಲು ಕಾನೂನಿನ ಅನ್ವಯ ಸಾಧ್ಯವೇ?

ಈ) ಹೆಚ್ಚುವರಿ ಹಣ ಮತ್ತು ಬಡ್ಡಿ ವಸೂಲು ಮಾಡಲು ಸಾಧ್ಯವಿಲ್ಲವೆಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ನಿರ್ಣಯ ಮಾಡಿ ಸರ್ಕಾರದ ಒಪ್ಪಿಗೆಗೆ ಕಳುಹಿಸಿದೆಯೇ; ಯಾವಾಗ

ಕಳುಹಿಸಿದೆ: ಸರ್ಕಾರ ಒಪ್ಪಿಗೆ ನೀಡಿದೆಯೇ; ನೀಡದಿದ್ದರೆ ಕಾರಣ ಏನು: ಯಾವಾಗ ಸರ್ಕಾರ ಇದಕ್ಕೆ ಒಪ್ಪಿಗೆ ನೀಡುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):

ಅ) ಹೌದು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ರಚನೆಯಾದಾಗಿನಿಂದ ಇಂದಿನವರೆಗೆ ಓವೈಹೆಚ್ಎಸ್ ಅಡಿಯಲ್ಲಿ 4,700 ಮನೆಗಳನ್ನು ಕಟ್ಟಲಾಗಿತ್ತು. ಹಾಗೂ 1987-88 ನೇ ಸಾಲಿನಲ್ಲಿ 5,567 ಮನೆಗಳಿಗೆ ಹುಡ್ಕೋ ನೆರವಿನಿಂದ ಆಶಾಮಂದಿರ ಅರ್ಜಿಗಳನ್ನು ಕರೆಯಲಾಗಿತ್ತು ಸ್ವಂತ ಮನೆ ಕೊಡುವ ಯೋಜನೆಯಲ್ಲಿ ಅರ್ಜಿದಾರರಿಂದ ರೂ. 75.19 ಕೋಟಿಗಳು ಹಾಗೂ ಆಶಾ ಮಂದಿರ ಯೋಜನೆಯಲ್ಲಿ 25.95,630 ರೂ.ಗಳು ಹುಡ್ಕೋದಿಂದ ಪಡೆದ ಸಾಲದ ಮೊತ್ತ ರೂ. 17,64,62,000ಗಳು.

ಆ) ಸ್ವಂತ ಮನೆ ಹೊಂದುವ ಯೋಜನೆಯಲ್ಲಿ ಎರಡು ವರ್ಷದಲ್ಲಿ ಪೂರ್ಣಗೊಳಿಸಬೇಕಾಗಿತ್ತು ಅದರಂತೆ, ಬಹುತೇಕ ಮನೆಗಳನ್ನು ಪೂರ್ಣಗೊಳಿಸಿ ಗ್ರಾಹಕರಿಗೆ ನೀಡಲಾಗಿದೆ.

ಫಲಾನುಭವಿಗಳು ಕಾಲಕಾಲಕ್ಕೆ ಕಂತಿನ ಮೊಬಲಗನ್ನು ಸರಿಯಾಗಿ ಪಾವತಿಸದ ಕಾರಣ ಆರ್ಥಿಕ ಮುಗ್ಗಟ್ಟಿನಿಂದ ಗುತ್ತಿಗೆದಾರರಿಗೆ ಹುಂಡಿಯನ್ನು ಪಾವತಿಸಲು ತಡವಾಗಿದೆ. ಇಂತಹ ಕೆಲವು ಪ್ರಕರಣಗಳಲ್ಲಿ ಮನೆ ನಿರ್ಮಾಣ ಕಾರ್ಯವು ಪೂರ್ಣಗೊಳಿಸುವಲ್ಲಿ ವಿಳಂಬವಾಗಿದೆ. ಹುಡ್ಕೋ ಯೋಜನೆಯಡಿ ಮನೆಗಳನ್ನು ಸಹ ಎರಡು ವರ್ಷದ ವಧಿಯಲ್ಲಿ ಮುಗಿಸಬೇಕಾಗಿರುತ್ತದೆ. ಇದರಲ್ಲಿಯ 5,567 ಮನೆಗಳ ಪೈಕಿ 4,453 ಮನೆಗಳನ್ನು ಈಗಾಗಲೇ ಪೂರ್ಣಗೊಳಿಸಿದ್ದು, ಇದರಲ್ಲಿ 863 ಮನೆಗಳನ್ನು ನಿಗದಿತ ಅವಧಿಯಲ್ಲಿ ಗ್ರಾಹಕರಿಗೆ ನೀಡಲಾಗಿದೆ. ಇನ್ನುಳಿದ 1,114 ಮನೆಗಳ ಪೈಕಿ ನಿರ್ಮಾಣ ಕಾರ್ಯವು ಪೂರ್ಣಗೊಂಡಿದ್ದು, ಗುತ್ತಿಗೆದಾರರು ಕಾಮಗಾರಿಯನ್ನು ಸ್ಥಗಿತಗೊಳಿಸಿರುವುದರಿಂದ ವಿಳಂಬವಾಗಿರುತ್ತದೆ.

ಇ) ವಿವಿಧ ವರ್ಗದ ಮನೆಗಳಿಗೆ ಹೆಚ್ಚುವರಿ ಹಣವನ್ನು ನಿಗದಿಪಡಿಸಿದ್ದು, ವಿವರ ಈ ಕೆಳಕಂಡಂತಿದೆ:

	ಅಂದಾಜು ಬೆಲೆ	ಅಂತಿಮ ಬೆಲೆ
ಇಡಬ್ಲ್ಯೂಎಸ್-2	15,000	30,000
ಎಲ್ಐಜಿ-1	20,000	65,100
ಎಂಐಜಿ-2	30,000	66,100
ಎಂಐಜಿ-1	60,000	96,000
ಎಂಐಜಿ-2	1,20,000	133,000
		133,700
		133,400
ಹೆಚ್.ಐಜಿ ಎ ಅಂಡ್ ಬಿ	1,80,000	280,000
	2,00,000	301,400
	3,00,000	247,900

ಕೆಲವು ವರ್ಗದ ಮನೆಗಳ ಅಂತಿಮ ಬೆಲೆಯು ಪ್ರಕಟಿತ ಅಂದಾಜು ಬೆಲೆಗಿಂತ ಕಡಿಮೆ ಆಗಿರುತ್ತದೆ.

ಈ) ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆಳಂದ ತಾಲ್ಲೂಕಿನ ಸಾಲೆಗಾಂ ಗ್ರಾಮದಲ್ಲಿ ಕೆರೆ ದುರಸ್ತಿ ಕಾಮಗಾರಿ

2116 (2561) - ಶ್ರೀ ರೇವುನಾಯಕ್ ಬೆಳಮಗಿ (ಕಮಲಪೂರ್) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಸಾಲೆಗಾಂ ಗ್ರಾಮದಲ್ಲಿರುವ ಕೆರೆಯ ವಿಸ್ತೀರ್ಣ ಎಷ್ಟು;

ಆ) ಈ ಕೆರೆಯ ಶಿಥಿಲವಾಗಿ ಹೊಡೆದು ಹೋಗುವ ಹಂತಕ್ಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) 40.00 ಹೆಕ್ಟೇರ್

ಆ) ಹೌದು.

ಇ) ಈ ಮೇಲ್ಕಂಡ ಕೆರೆಯ ಕೆಳಮೈ ಏರಿಯು ಕುಸಿದಿದ್ದು, ಇದನ್ನು ತಾಂತ್ರಿಕವಾಗಿ ಸಮರ್ಪಕ ರೀತಿಯಲ್ಲಿ ದುರಸ್ತಿಗೊಳಿಸಬೇಕಾಗಿದ್ದರಿಂದ ಪ್ರಸ್ತಾವನೆಯನ್ನು ದಿನಾಂಕ: 23-05-2002 ರಂದು ನಡೆದ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯ ಮುಂದೆ ಮಂಡಿಸಲಾಗಿತ್ತು. ಈ ಸಮಿತಿಯು ನೀಡಿದ್ದ ಸಲಹೆಯಂತೆ ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರು ದಿನಾಂಕ:11-07-2002 ರಂದು ಸ್ಥಳ ಪರಿವೀಕ್ಷಣೆ ಮಾಡಿ ವರು ನೀಡಿದ್ದ ಸಲಹೆಗಳ ಪ್ರಕಾರ ವಿನ್ಯಾಸವನ್ನು ಬದಲಾಯಿಸಿ ರೂ. 193.00 ಲಕ್ಷಗಳಿಗೆ ಪರಿಷ್ಕೃತ ಅಂದಾಜನ್ನು ತಯಾರಿಸಿ ಇದಕ್ಕೆ ಅನುಮೋದನೆ ಪಡೆಯಲು ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯ ಮುಂದೆ ಮಂಡಿಸಲಾಗಿರುತ್ತದೆ. ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯು ಅನುಮೋದನೆ ನೀಡಿದ ನಂತರ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲು ಕ್ರಮವನ್ನು ಕೈಗೊಳ್ಳಲಾಗುವುದು.

ಕಮಲಾಪುರ ಕ್ಷೇತ್ರದ ಕೆರೆಗಳ ಹೂಳು ತೆಗೆಯುವುದು

2117 (2563) - ಶ್ರೀ ರೇವುನಾಯಕ್ ಬೆಳಮಗಿ (ಕಮಲಪೂರ್) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಮಲಾಪುರ ವಿಧಾನ ಸಭಾ ಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಗೆ ಸೇರಿದ ಎಷ್ಟು ಕೆರೆಗಳಿವೆ;

ಆ) ಈ ಕೆರೆಗಳು ಸಂಪೂರ್ಣ ಹೂಳು ತುಂಬಿರುವುದಲ್ಲದೆ ದುರಸ್ತಿಯಾಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕೆರೆಗಳ ಹೂಳು ತೆಗೆಯಲು ಹಾಗೂ ಕೆರೆಗಳ ದುರಸ್ತಿಗೆ ಸಾರ್ಕರ ಯಾವ ಕ್ರಮ ಕೈಗೊಂಡಿದೆ?